ನೋಟಿಫಿಕೇರ್ಷ್.

1ನೇ ಸೆಪ್ಟಂಬರ್ 1890.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಆನೆಯು ಮೂರಲ್ಪಡುತ್ತದೆ. ಆದ್ದರಿಂದ ಈ ಕೆಳಗೆ ರುಜು ಮಾಡಿರುವವರಿಗೆ ಕೂಡ್ಲೇ ಬರದುಕೊಳ್ಳತಕ್ಕದ್ದು. ಈ ಆನೆಯನ್ನ ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಯಲ್ಲಾಗಲಿ ಅಥವಾ ಹೆಗ್ಗಡದೇವನ ಕೋಟೆ ತಾಲ್ಲೂಕು ಹಂಪಾಪುರ ಅಥವಾ ಕಾರಾಪುರದಲ್ಲಾಗಲಿ ನೋಡಬಹುದು.

ಆನೆ ಹೆಸರು.	ಜಾತಿ.	ಯತ್ತರ.		ಹಿಡಿಯಲ್ಪಟ್ಟು ತಾರೀಖು.
		ಅಡಿ.	ಅಂಗಲ	
ಕಲ್ಯಾಣಿ	ಹೆಣ್ಣು	7	4	28—6—86.

ಪರಾ.—ಈ ಆನೆಯು ಚನ್ನಾಗಿ ತಯಾರ್ಮಾಡಲ್ಪಟ್ಟಿದೆ ಮತ್ತು ಪೊಳ್ಳೇ ಆರೋಗ್ಯ ಸ್ಥಿತಿಯಲ್ಲಿದೆ. ಈ ಆನೆಯು 1887ನೇ ಇಸವಿ ಲಾಗಾಯತು ಹೊಸ ಆನೆಗಳನ್ನು ತಯಾರ್ಮಾಡಲು ಉಪಯೋಗಿಸಲ್ಪಡುತ್ತಾ ಇದೆ.

ಬಿ. ರಾಮುಸ್ವಾಮಿ ಐಯ್ಯರ್,
ಅಸಿಸ್ಟೆಂಟ್ ಕ್ಯಾಪ್ಟನ್ ಆಫ್ ಮೈಸೂರ್.

ಸ್ವಂತ ಪ್ರಕಟನೆ.

ಬೆಂಗಳೂರು ಅರಳೇಪೇಟೆಯಲ್ಲಿ ಇರುವ ಸಬ್ ಪೋಸ್ಟ್ ಮಾಸ್ಟರ್ ರಂಗಂಣನವರ ಕೊಮಾರ ಸಿವನಂಜಪ್ಪನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ನನ್ನ ತಂದೆಯಾದ ಮೇಲ್ಕಂಡ ರಂಗಂಣನವರು ಈ ಕೆಳಗೆ ನಮೂದಾಗುವ ಚಕ್ಕು ಬಂದಿಗೆ ವಳಪಟ್ಟು ನಮ್ಮ ಪಿತಾರ್ಜಿತದ ಮನೆಯನ್ನು ನನ್ನ ಅನುಮತಿ ಯಿಲ್ಲದೆ ತಮ್ಮ ಮಗಳ ಹೆಸರಿಗೆ ಖರೀದಿ ಮಾಡಿರುವದಾಗಿಯು ಆಕೆಯಿಂದ ಮತ್ಯಾರಿಗಾದರು ಕ್ರಯಮಾಡಿಸಿ ಹೊಬಲಗು ತೆಗದುಕೊಂಡು ಪರಸ್ಥಳ ಹೊರಡುವ ಪ್ರಯತ್ನದಲ್ಲಿ ಇರುವಂತೆಯೂ ವರ್ತಮಾನ ತಿಳಿಯಬಂದಿರುತ್ತೆ.

ಡಿಟೋ ಮನೆ ಮೇಲೆ ನನಿಗೆ ಸಂಪೂರ್ಣ ಹಕ್ಕು ಇರುವದರಿಂದ ಆ ಮನೆಯನ್ನ ಯಾರಾಗಲಿ ನನ್ನ ಅನುಮತಿಸಿವಾಯಿ ಕೊಂಡುಕೊಳ್ಳಕೂಡದು, ಹಾಗೇನಾದರು ತೆಗದುಕೊಂಡಿದ್ದೇ ಆದರೆ ಅಂಥಾ ಕ್ರಯವು ಪೂರ್ಜಿತವಾಗತಕ್ಕದ್ದಲ್ಲ ಸಾಫ್ ತಿಳಿಯುವದು, ನನ್ನ ಇತರ ಜಿಂದಗಿ ವಗ್ಯೆರೆ ವಿಷಯದಲ್ಲಿ ನನ್ನ ತಂದೆ ಮೇಲೆ ದಾವಾ ಮಾಡುವ ಪ್ರಯತ್ನದಲ್ಲಿ ಇದ್ದೇನೆ.

ಮನೆ ಚಕ್ಕು ಬಂದಿ.

ಬೆಂಗಳೂರು ಅರಳೇಪ್ಯಾಟೆಗೆ ಕೀರಿದ ಗವ್ವಡನಪೇಟೆಯಲ್ಲಿ ಇರುವ ಪೂರ್ವಕ್ಕೆ ವಾಚರಲು ಲಕ್ಷ್ಮಯ್ಯನ ಮನೆ ಪಶ್ಚಿಮಕ್ಕೆ ಸರದಾರ ಪೆಥಂಣನವರ ಮನೆ ಪೈತ್ತರಕ್ಕೆ ತೋಟದ ವ್ಯಾವರಮಠ ದಕ್ಷಿಣಕ್ಕೆ ಸಾರ್ತಾರದ ಸಂದು ಈ ಮಧ್ಯೆ ಇರುವ ಬೋರ್ಡು ನಂಬರು 23ನೇ ಮನೆ.

ತಾರೀಖು 18ನೇ ಮಾಜೇ ಡಿಶಂಬರ್ 1890ನೇ ಇಸವಿ.

ಬಿ. ಸಿವನಂಜಪ್ಪನ ರುಜು.

ಗವರ್ಮೆಂಟ್ ತಯಾರೀ ಬಾಟಲು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನ್ಯೆಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ ಆಫಿಸರಿಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಒಂದು ಪೌಂವುಳ್ಳ ಡಬ್ಬಿಗೆ 17 ರೂ. 8 ಆಣೆ; ಈ ಔಷಧವು ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಡ್ರೂರೋಪಿಯರ್ಸ ವ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ, ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂ ಡಬ್ಬಿಗೆ ಹನ್ನೆರಡಾಣೆ ಹಾಸಲೂ ಕೊಡಬೇಕು.